# ಶ್ರೀಮಾತೆಯವರು : ನಾನು ಕಂಡಂತೆ

ಬಂಗಾಳಿ ಮೂಲ : **ಸ್ವಾಮಿ ಭೂಮಾನಂದ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

**ಭಾಗ ೩**

ಒಂದು ದಿನ ಶರತ್ ಮಹಾರಾಜರು ನನ್ನನ್ನು ಕರೆದು ಕೆಲವು ಕಾಗದ ಪತ್ರಗಳನ್ನು ನನ್ನ ಕೈಗೆ ಕೊಟ್ಟು ಹೇಳಿದರು: ''ಇವುಗಳನ್ನು ಓದಿ ನೋಡು. ಏನಾದರೂ ಬದಲಾಯಿಸಬೇಕು ಎಂದಿದ್ದರೆ ನನಗೆ ತಿಳಿಸು.'' ಈ ಪ್ರಯಾಣದ ಸಮಯದಲ್ಲಿ ಶರತ್ ಮಹಾರಾಜರು ಶ್ರೀಮಾತೆಯವರ ಹೊಸ ಮನೆಯ ಬೈಠಕ್ ಖಾನೆಯ ಕೋಣೆಯಲ್ಲಿ ತಂಗಿದ್ದರು. ನಾನು ಕಾಳೀಮಾವನ ಬೈಠಕ್‌ಖಾನೆಯಲ್ಲಿ ಉಳಿದುಕೊಂಡೆ. ಶರತ್ ಮಹಾರಾಜರ ಕಡೆಯಿಂದ ಮರಳಿಬಂದ ಮೇಲೆ, ಆ ಕಾಗದ ಪತ್ರಗಳನ್ನೆಲ್ಲ ಮೊದಲಿನಿಂದ ಕೊನೆಯವರೆಗೂ ಓದಿ ನೋಡಿದೆ. ಶ್ರೀ ಜಗದ್ಧಾತ್ರಿಯ ಹೆಸರಿನಲ್ಲಿ ಸಮರ್ಪಣೆ ಮಾಡುವ 'ಸಮರ್ಪಣಾ ಪತ್ರ' ಅದಾಗಿತ್ತು.

ಶ್ರೀಮಾತೆಯವರು 'ಉದ್ಬೋಧನ'ಕ್ಕೆ ಬರುವವರೆಂಬುದು ನಿರ್ಧಾರಿತವಾಯಿತು. ದಾರಿಯಲ್ಲಿ ಶ್ರೀಮಾತೆಯವರು ಕೋಯಲ್ ಪಾರಾದ ಜಗದಂಬಾ ಆಶ್ರಮದಲ್ಲಿ ಎರಡು ದಿನ ತಂಗುವರು, ಹಾಗೂ ಆ ಸಮಯದಲ್ಲಿ ಸಮರ್ಪಣ ಪತ್ರವನ್ನು ರಿಜಿಸ್ಟರ್ ಮಾಡಲಾಗುವುದು. ಅದಾದ ನಂತರ ಶ್ರೀಮಾತೆಯವರು ತಮ್ಮ ಪ್ರಯಾಣವನ್ನು ಮುಂದುವರಿಸುವರೆಂದು ನಿರ್ಧರಿಸಲಾಯಿತು.

ಸರಿಯಾದ ಸಮಯದಲ್ಲಿ ಶ್ರೀಮಾತೆಯವರು ಪಲ್ಲಕ್ಕಿಯಲ್ಲಿ ಕೋಯಲ್‌ಪಾರಾಗೆ ಬಂದರು. ಜೊತೆಯಲ್ಲಿ ಸ್ವಾಮಿ ಶಾರದಾನಂದರು, ಸ್ವಾಮಿ ಸುಬೋಧಾನಂದರು (ಖೋಕಾ ಮಹಾರಾಜ್), ಬಾಂಕುರದಿಂದ ಬಂದ ವಿಭೂತಿಭೂಷಣ ಘೋಷ್ ಮೊದಲಾದವರೂ ಕಾಲುನಡಿಗೆಯಲ್ಲಿ ಹೊರಟರು. ಸಾಮಾನುಗಳನ್ನೆಲ್ಲ ಕೂಲಿಗಳ ತಲೆಯ ಮೇಲೆ ಹೊರಿಸಿ ನಾನೂ ಜೊತೆಯಲ್ಲಿ ಹೊರಟೆ.

ಅಂದು ಸಂಜೆ ಶ್ರೀಮಾತೆಯವರು ಕೋಯಲ್‌ಪಾರಾದ ಜಗದಂಬಾ ಆಶ್ರಮಕ್ಕೆ ಬಂದರು. ಮರುದಿನ ರಾತ್ರಿಯ ವೇಳೆಗೆ ಕೊತುಲ್‌ಪುರದಿಂದ ಸಬ್-ರಿಜಿಸ್ಟ್ರಾರ್ ಬಂದ. ದಾಖಲೆಗಳನ್ನು ರಿಜಿಸ್ಟ್ರಿ ಮಾಡಿಸಿದ್ದಾಯಿತು. ಅದರ ಮರುದಿನ ಸಾಯಂಕಾಲ ಕಲ್ಕತ್ತೆಗೆ ಹೋಗಲು, ಎತ್ತಿನ ಗಾಡಿಗಳಲ್ಲಿ ವಿಷ್ಣುಪುರದ ಕಡೆಗೆ ಎಲ್ಲರೂ ಹೊರಟರು. ವಿಷ್ಣುಪುರದಲ್ಲಿ ಒಂದು ದಿನ ತಂಗಿದ್ದು, ಮರುದಿನ ಹೊರಟು ಶ್ರೀಮಾತೆಯವರು ಸಂಜೆಯ ಹೊತ್ತಿಗೆ 'ಉದ್ಬೋಧನ'ಕ್ಕೆ ಶುಭಾಗಮನ ಮಾಡಿದರು. ಅವರು ಆಷಾಢ ಮಾಸದಲ್ಲಿ 'ಉದ್ಬೋಧನ'ಕ್ಕೆ ಬಂದಿದ್ದರು. ಶ್ರಾವಣ ಮಾಸದಲ್ಲಿ ಶ್ರೀ ಮಹಾರಾಜ್ (ಸ್ವಾಮಿ ಬ್ರಹ್ಮಾನಂದರು) ಕನ್ಯಾಕುಮಾರಿ



ದರ್ಶನ ಮಾಡಲು ತುಳಸಿ ಮಹಾರಾಜರೊಂದಿಗೆ (ಸ್ವಾಮಿ ನಿರ್ಮಲಾನಂದರು) ಹೊರಟರು. ಶ್ರೀಮಹಾರಾಜ್ ನನ್ನನ್ನೂ ತಮ್ಮೊಂದಿಗೆ ಕರೆದುಕೊಂಡು ಹೋಗಿದ್ದರು. ಈ ಯಾತ್ರೆಯ ಸಂದರ್ಭದಲ್ಲಿ ನಾನು ಸುಮಾರು ಹದಿನೇಳು ತಿಂಗಳ ಕಾಲ ಮಹಾರಾಜರೊಂದಿಗೆ ದಕ್ಷಿಣಭಾರತದಲ್ಲಿ ಹಾಗೂ ಪುರಿಯಲ್ಲಿ ಇದ್ದೆ.

೧೯೧೮ರ ಜನವರಿ ೧೮ರಂದು ಸ್ವಾಮಿ ವಿಶ್ವೇಶ್ವರಾನಂದರಿಂದ (ಕಪಿಲ್ ಮಹಾರಾಜ್) ಟೆಲಿಗ್ರಾಂ ಮೂಲಕ ಶರತ್ ಮಹಾರಾಜರಿಗೆ ಸುದ್ದಿ ಬಂತು, ಶ್ರೀಮಾತೆಯವರು ಜ್ವರದಿಂದ ಬಳಲುತ್ತಿದ್ದಾರೆ ಎಂದು. ಶರತ್ ಮಹಾರಾಜರಿಗೋ – ಕೈತುಂಬ ಕೆಲಸ. ಅಲ್ಲದೆ ಹರಿ ಮಹಾರಾಜ್ (ಸ್ವಾಮಿ ತುರೀಯಾನಂದರು), ಬಾಬುರಾಮ್ ಮಹಾರಾಜರು ಅನಾರೋಗ್ಯದಿಂದಿದ್ದಾರೆ. ರಾಜಾ ಮಹಾರಾಜ್ 'ಉದ್ಬೋಧನ'ದಲ್ಲಿದ್ದಾರೆ. ಇವನ್ನೆಲ್ಲ ಗಮನದಲ್ಲಿಟ್ಟುಕೊಂಡು, ಒಂದು ನಿಮಿಷದಲ್ಲೇ ನಿರ್ಧಾರ ತೆಗೆದುಕೊಂಡು ಅವರು ಹೇಳಿದರು, ''ನಾಳೆ ಜಯರಾಮಬಾಟಿಗೆ ಹೋಗುತ್ತೇನೆ.'' ಮರುದಿನ ಡಾಕ್ಟರ್ ಜ್ಞಾನೇಂದ್ರನಾಥ ಕಾಂಜಿ

ಲಾಲ್, ಡಾಕ್ಟರ್ ಸತೀಶಚಂದ್ರ ಚಕ್ರವರ್ತಿ (ಶರತ್ ಮಹಾರಾಜರ ತಮ್ಮ), ಶ್ರೀ ವಿಮಲ್ (ಸ್ವಾಮಿ ದಯಾನಂದರು), ಯೋಗಿನ್–ಮಾ, ಗೋಲಾಪ್–ಮಾ ಹಾಗೂ ನಾನು ಶರತ್ ಮಹಾರಾಜರೊಂದಿಗೆ ರಾತ್ರಿಯ ರೈಲು ಗಾಡಿಯಲ್ಲಿ ಹೊರಟೆವು. ಜನವರಿ ೨೧ ರಂದು ಬೆಳಿಗ್ಗೆ ಹತ್ತು ಗಂಟೆಯ ಹೊತ್ತಿಗೆ ಜಯರಾಮಬಾಟಿಯನ್ನು ತಲುಪಿದೆವು.

ಶ್ರೀಮಾತೆಯವರು ಹೇಳಿದರು, ''ಕಾಂಜೀಲಾಲನ ಔಷಧಿ ತೆಗೆದುಕೊಳ್ಳುತ್ತೇನೆ.'' ಕಾಂಜಿಲಾಲ್ ವೈದ್ಯರೇ ಹೋಮಿಯೋಪಥಿ ಪದ್ಧತಿ ಪ್ರಕಾರ ಚಿಕಿತ್ಸೆ ನೀಡಲು ಆರಂಭಿಸಿದರು. ಮರುದಿನ ಶ್ರೀಮಾತೆಯವರು ಔಷಧಿ ಸ್ವೀಕರಿಸಿ ಗುಣಮುಖರಾದರು. ಜನವರಿ ೨೮ರಂದು ಪಥ್ಯವಾಗಿ ಅನ್ನವನ್ನು ಉಂಡರು.

ಶ್ರೀಮಾತೆಯವರನ್ನು 'ಉದ್ಬೋಧನ'ಕ್ಕೆ ಕರೆದುಕೊಂಡು ಬರಬಹುದೆಂಬ ಆಸೆ ಶರತ್ ಮಹಾರಾಜರಿಗಿತ್ತು. ಆದರೆ ಶ್ರೀಮಾತೆಯವರು ಪ್ರಯಾಣ ಮಾಡಲು ಯಾವುದೇ ಬಗೆಯ ಉತ್ಸುಕತೆಯನ್ನು ತೋರಿಸಲಿಲ್ಲ. ಆದರೂ ಶರತ್ ಮಹಾರಾಜರು ನನ್ನನ್ನು ಜಯರಾಮಬಾಟಿಯಲ್ಲೇ ಇರಲು ಹೇಳಿ, ತಮ್ಮೊಂದಿಗೆ ಶ್ರೀ ವಿಮಲ್ ಅವರನ್ನು ಕರೆದುಕೊಂಡು ಕಾಮಾರಪುಕುರ, ಬದನಗಂಜ್ ಮೂಲಕ ಕೋಯಲ್‌ಪಾರಾಗೆ ಹೋಗಿ, ಅಲ್ಲಿಂದ 'ಉದ್ಬೋಧನ'ಕ್ಕೆ ಮರಳಿದರು. ನಾನು ಹದಿನಾಲ್ಕು–ಹದಿನೈದು ದಿನ ಜಯರಾಮಬಾಟಿಯಲ್ಲಿದ್ದೆ. ಈ ಬಾರಿ 'ಉದ್ಬೋಧನ'ಕ್ಕೆ ಹೋಗುವುದಿಲ್ಲ ಎಂದು ಶ್ರೀಮಾತೆಯವರು ನಿರ್ಧರಿಸಿಕೊಂಡಿದ್ದರು. ಶ್ರೀರಾಮಕೃಷ್ಣರ ಜಯಂತಿಯ ದಿನದಂದು ನಾನು 'ಉದ್ಬೋಧನ'ಕ್ಕೆ ಮರಳಿ ಬಂದೆ.

ಹರಿ ಮಹಾರಾಜರು ಚಿಕಿತ್ಸೆಗಾಗಿ 'ಉದ್ಬೋಧನ'ದಲ್ಲಿದ್ದರು. ಮಾಯಾವತಿ ಅದ್ವೈತ ಆಶ್ರಮದ ಸ್ವಾಮಿ ಪ್ರಜ್ಞಾನಂದರು ಕಾಯಿಲೆ ಬಿದ್ದು, ಚಿಕಿತ್ಸೆಗಾಗಿ ಅವರು ಕೂಡಾ 'ಉದ್ಬೋಧನ'ಕ್ಕೆ ಬಂದಿದ್ದರು. ಅಷ್ಟರಲ್ಲಿ ಕೋಯಲ್‌ಪಾರಾ ಮಠದಿಂದ ಟೆಲಿಗ್ರಾಂ ಬಂತು (೧೯೧೮ರ ಏಪ್ರಿಲ್ ೧೧ರಂದು) – ಶ್ರೀಮಾತೆಯವರಿಗೆ ಜ್ವರ ಬಂದಿದೆ, ಜ್ವರ ಕಡಿಮೆಯಾಗುತ್ತಿಲ್ಲ ಎಂಬುದಾಗಿ. ಶ್ರೀಮಾತೆಯವರಿಗೆ ಅನಾರೋಗ್ಯವುಂಟಾದಾಗಲೆಲ್ಲ ಶರತ್ ಮಹಾರಾಜರು ದಿನವಿಡೀ ಚಿಂತೆಗೊಳಗಾಗುತ್ತಿದ್ದರು. ಈ ಸಲವೂ ಅವರು ನಿರ್ಧರಿಸಿದರು – ಡಾಕ್ಟರ್ ಕಂಜೀಲಾಲ್, ಸ್ವಾಮಿ ಪರಮೇಶ್ವರಾನಂದ (ಕಿಶೋರಿ) ಹಾಗೂ ನನ್ನೊಂದಿಗೆ ಕೋಯಲ್‌ಪಾರಾಗೆ ಹೋಗುವುದಾಗಿ.

ಕೋಯಲ್‌ಪಾರಾ ಮಠಕ್ಕೆ ಹೋದ ಕೂಡಲೇ ಡಾಕ್ಟರ್ ಚಿಕಿತ್ಸೆ ಆರಂಭಿಸಿದರು. ಆದರೆ ಶ್ರೀಮಾತೆಯವರ ಜ್ವರ ಕಡಿಮೆಯಾಗಲಿಲ್ಲ. ಆವಾಗಲೆಲ್ಲ ಜ್ವರ ಆರಂಭವಾದರೆ ಸಾಕು, ಜ್ವರದ ತಾಪದಿಂದ ಶ್ರೀಮಾತೆ ಹೇಳುತ್ತಿದ್ದರು, ''ಯಾಕೆ, ಶರತ್ ಇನ್ನೂ ಬರಲಿಲ್ಲ?'' ನಾನು ಶ್ರೀಮಾತೆಯವರನ್ನು, ''ಅಮ್ಮಾ, ಶರತ್ ಮಹಾರಾಜರಿಗೆ ಪತ್ರ ಬರೆಯಲೆ?'' ಎಂದು ಕೇಳಿದರೆ, ಶ್ರೀಮಾತೆಯವರು ಹೇಳುತ್ತಿದ್ದರು: ''ಬೇಡ, ಬರೆಯಬೇಡ, ಈ ಬೇಸಿಗೆಯಲ್ಲಿ ಮಗುವಿಗೆ ಬರಲು ಕಷ್ಟವಾದೀತು.''

ಆ ಕೂಡಲೇ ಮತ್ತೆ ಹೇಳುತ್ತಿದ್ದರು, ''ಯಾಕೆ ಶರತ್ ಬರಲಿಲ್ಲ?'' ಅಂತ. ಇತ್ತ ಶ್ರೀಮಾತೆಯವರು ಜ್ವರದ ನಡುವೆ ಹೇಳುತ್ತಿದ್ದರು: ''ಯಾಕೆ, ಶರತ್ ಬರಲಿಲ್ಲ?'' ಅಂತ. ಅವರನ್ನು ಕೇಳಿದಾಗ, ''ಬೇಡ, ಪತ್ರ ಬರೆಯಬೇಡ'' ಎಂದರು. ನಾನು ಇದೆಲ್ಲವನ್ನೂ ಶರತ್ ಮಹಾರಾಜರಿಗೆ ತಿಳಿಸಿದೆ. ಡಾಕ್ಟರ್ ಕಾಂಜೀಲಾಲ್ ಕೂಡ ಜ್ವರ ಹೆಚ್ಚಿರುವುದನ್ನು ಕಂಡು ಪತ್ರ ಬರೆದರು. ಶರತ್ ಮಹಾರಾಜ್ ಏಪ್ರಿಲ್ ೧೭ರಂದು ಮಧ್ಯಾಹ್ನ ಎರಡೂವರೆ ಗಂಟೆಯ ಹೊತ್ತಿಗೆ ಕುದುರೆಗಾಡಿ ಮಾಡಿಕೊಂಡು, ವಿಷ್ಣುಪುರ ಮೂಲಕ ಕೋಯಲ್‌ಪಾರಾ ಮಠಕ್ಕೆ ಬಂದು ತಲುಪಿದರು. ಅವರೊಂದಿಗೆ ಡಾಕ್ಟರ್ ಸತೀಶ್‌ಚಂದ್ರ ಚಕ್ರವರ್ತಿ ಹಾಗೂ ಯೋಗಿನ್–ಮಾ ಕೂಡ ಬಂದಿದ್ದರು. ಶರತ್ ಮಹಾರಾಜರ ಈ ಅನಿರೀಕ್ಷಿತ ಭೇಟಿಯಿಂದಾಗಿ ಎಲ್ಲರಿಗೂ ಒಂದು ರೀತಿಯಲ್ಲಿ ವಿಶೇಷ ಭರವಸೆ ಉಂಟಾಯಿತು.

ಶರತ್ ಮಹಾರಾಜರು ಗಾಡಿಯಿಂದಿಳಿದು, ನೇರವಾಗಿ ಶ್ರೀಮಾತೆಯವರ ಬಳಿಗೆ ಹೋದರು. ಅವರ ಹಾಸಿಗೆಯ ಬಳಿ ನಿಂತು, ಶ್ರೀಮಾತೆಯವರನ್ನು ನೋಡತೊಡಗಿದರು. ಅನಂತರ ನಿಧಾನವಾಗಿ ಶ್ರೀಮಾತೆಯವರ ತಲೆಯ ಭಾಗದಲ್ಲಿ, ಹಾಸಿಗೆಯ ಮೇಲೆ ಕುಳಿತರು. ಅಷ್ಟರಲ್ಲಿ ಶ್ರೀಮಾತೆಯವರ ಜ್ವರ ಅಧಿಕವಾಗಿತ್ತು. ಅವರು ಎರಡೂ ಕೈಗಳಿಂದ ಏನನ್ನೋ ಹಿಡಿಯಲು ಯತ್ನಿಸುವಂತೆ ತಡಕಾಡುತ್ತಿದ್ದರು. ಶರತ್ ಮಹಾರಾಜ್ ಡಾಕ್ಟರನ್ನು ಕೇಳಿದರು, ''ಶ್ರೀಮಾತೆಯವರು ಹೀಗೇಕೆ ಮಾಡುತ್ತಿದ್ದಾರೆ?'' ಡಾಕ್ಟರ್ ಹೇಳಿದರು, ''ಜ್ವರ ಹೆಚ್ಚಾದಾಗ ಅವರ ಕೈಗಳಲ್ಲಿ ಉರಿಯೇಳುತ್ತದೆ. ಆಗ ಯಾವುದಾದರೂ ತಣ್ಣಗಿನ ವಸ್ತುವಿನ ಮೇಲೆ ಕೈಯನ್ನಿಡಬೇಕೆಂದು ಹಾಗೆ ಮಾಡುತ್ತಾರೆ.'' ಶರತ್ ಮಹಾರಾಜರಿಗೆ ತಮ್ಮ ದೇಹ ತಣ್ಣಗಿರುವುದಾಗಿ ತಿಳಿದಿತ್ತು. ಈ ಕಾರಣದಿಂದ ಅವರು ಆ ಕೂಡಲೇ ತಮ್ಮ ಅಂಗಿಯ ಗುಂಡಿಗಳನ್ನು ಕಳಚತೊಡಗಿದರು. ಬಳಿಕ ಶ್ರೀಮಾತೆಯವರ ಎರಡೂ ಕೈಗಳನ್ನು ತಮ್ಮ ಬಲಗೈಯ ಮೇಲಿಟ್ಟುಕೊಂಡು, ಎಡಗೈಯ ಮೂಲಕ ತಮ್ಮ ಅಂಗಿ, ಬನೀನುಗಳನ್ನು ಬಹಳ ಕಷ್ಟದಿಂದ ಕಳಚಿ ಎಸೆದು, ಶ್ರೀಮಾತೆಯವರ ಎರಡೂ ಕೈಗಳನ್ನು ತಮ್ಮ ಬಳಿಗೆ ಸೆಳೆದು ತಮ್ಮ ದೇಹದ ಮೇಲಿಟ್ಟುಕೊಂಡರು. ಶ್ರೀಮಾತೆಯವರು 'ಆಃ' ಎಂದು ಉದ್ಗರಿಸುತ್ತ ಕಣ್ಣುತೆರೆದು ನೋಡಿದರು: ಆದರೆ ಅವರು ತಲೆಯ ಮೇಲೆ ಸೆರಗನ್ನು ಎಳೆದುಕೊಳ್ಳದೆ ಇದ್ದುದನ್ನು ಕಂಡು ಎಲ್ಲರಿಗೂ ಅರ್ಥವಾಯಿತು – ಶರತ್ ಮಹಾರಾಜ್ ಅಲ್ಲಿಗೆ ಬಂದಿದ್ದಾರೆ ಎಂಬುದು ಶ್ರೀಮಾತೆಯವರಿಗೆ ತಿಳಿಯಲಿಲ್ಲ ಎಂದು. ಏಪ್ರಿಲ್ ೧೮ರಂದು ಶ್ರೀಮಾತೆಯವರ ಜ್ವರ ಬಿಟ್ಟುಹೋಯಿತು. ಏಪ್ರಿಲ್ ೨೧ರಂದು ಶ್ರೀಮಾತೆಯವರು ಅನ್ನ ಊಟ ಮಾಡಿದರು. ಡಾಕ್ಟರ್ ಕಾಂಜಿಲಾಲ್ ಕಲ್ಕತ್ತೆಗೆ ಮರಳಿದರು.

ಶ್ರೀಮಾತೆಯವರು ಅನ್ನ ಊಟ ಮಾಡಿದ್ದನ್ನು ಕಂಡು ಎಲ್ಲರಿಗೂ ಆನಂದವುಂಟಾಯಿತು. ಹೀಗಿರುವಾಗ ಒಂದು ದಿನ ಪಿಯುನ್ ಬಂದು ಪತ್ರವೊಂದನ್ನು ಕೊಟ್ಟುಹೋದ. ಶರತ್ ಮಹಾರಾಜರು ಪತ್ರವನ್ನು ಓದಿ, ರಾಸಬಿಹಾರಿ ಮಹಾರಾಜರಿಗೆ ಅದನ್ನು ಕೊಟ್ಟು ಹೇಳಿದರು, ''ಓದಿ ನೋಡು.'' ರಾಸಬಿಹಾರಿ ಮಹಾರಾಜರು ಓದಿದ ಬಳಿಕ ಎಲ್ಲರಿಗೂ ವಿಷಯ ತಿಳಿಸಿದರು– ಸ್ವಾಮಿ ಪ್ರಜ್ಞಾನಂದರು ದೇಹತ್ಯಾಗ ಮಾಡಿದರು ಎಂಬುದಾಗಿ.

ಕೆಲವು ದಿನಗಳು ಕಳೆದವು. ಶ್ರೀಮಾತೆಯವರ ದೇಹಾರೋಗ್ಯ ದಿನೇ ದಿನೇ ಸುಧಾರಿಸುತ್ತಿದೆ.

ಏಪ್ರಿಲ್ ೨೯ರಂದು ಶ್ರೀಮಾತೆಯವರು ಜಯರಾಮಬಾಟಿಗೆ ಮತ್ತೆ ಹೋದರು. ಶರತ್ ಮಹಾರಾಜ್ ಜೊತೆಗಿದ್ದರು. ಅದೇ ದಿನ ಡಾಕ್ಟರ್ ಸತೀಶ್‌ಬಾಬು ಕಲ್ಕತ್ತೆಗೆ ಮರಳಿದರು.

ಮೇ ೫ರಂದು ಶ್ರೀಮಾತೆ ಕಲ್ಕತ್ತೆಗೆ ಪ್ರಯಾಣ ಮಾಡಿದರು. ರಾತ್ರಿಹೊತ್ತು ಕೋಯಲ್‌ಪಾರಾ ಜಗದಂಬಾ ಆಶ್ರಮದಲ್ಲಿ ಅವರು ತಂಗಿದ್ದರು. ಮರುದಿನ (ಮೇ ೬) ಬೆಳಿಗ್ಗೆ ಪಲ್ಲಕ್ಕಿಯಲ್ಲಿ ಪ್ರಯಾಣ ಆರಂಭಿಸಿ, ಸುಮಾರು ಹನ್ನೊಂದು ಗಂಟೆಯ ಹೊತ್ತಿಗೆ ವಿಷ್ಣುಪುರದ ಭಕ್ತ ಸುರೇಶ್ವರ ಸೇನ್‌ನ ಮನೆಗೆ ತಲುಪಿದರು. ಮೇ ೭ರಂದು ಬೆಳಿಗ್ಗೆ ಹತ್ತೂವರೆ ಗಂಟೆಗೆ ರೈಲುಗಾಡಿಯ ಮೂಲಕ ಕಲ್ಕತ್ತೆಗೆ ಹೊರಟರು. ಜೊತೆಗೆ ಶರತ್ ಮಹಾರಾಜ್ ಯೋಗಿನ್–ಮಾ, ಸರಳಾ (ಮುಂದೆ ಪ್ರವ್ರಾಜಿಕಾ ಭಾರತೀಪ್ರಾಣಾ) ಇತ್ಯಾದಿ ನಾವು ಅನೇಕ ಮಂದಿ ಇದ್ದೆವು.

ರೈಲು ವಿಷ್ಣುಪುರದಿಂದ ಹೊರಟಿತು. ಮೂರನೇ ದರ್ಜೆಯ 'ದರ್ಬಾರ್ ಗಾಡಿ'ಯನ್ನು ನಾವು ಏರಿದ್ದೆವು. ಒಂದೆಡೆ ಶ್ರೀಮಾತೆ, ಪಕ್ಕದಲ್ಲಿ ಶರತ್ ಮಹಾರಾಜ್; ಇನ್ನೊಂದೆಡೆ ನಾವೆಲ್ಲ ಇದ್ದೆವು. ರಾತ್ರಿ ಎಂಟು ಗಂಟೆಗೆ ಶ್ರೀಮಾತೆ 'ಉದ್ಬೋಧನ' ತಲುಪಿದರು.

ಶ್ರೀಮಾತೆಯವರು ದೇವರ ಕೋಣೆಯಲ್ಲಿ ಉಳಿದುಕೊಂಡರು. ಪಕ್ಕದ ಕೋಣೆಯಲ್ಲಿ ರಾಧು ಮುಂತಾದವರಿದ್ದರು. ಶರತ್ ಮಹಾರಾಜರ ಕೋಣೆಯಲ್ಲಿ ಅನಾರೋಗ್ಯದಿಂದಿದ್ದ ಹರಿ ಮಹಾರಾಜ್ ಇದ್ದರು. ಕೆಳ ಅಂತಸ್ತಿನಲ್ಲಿ ಶಚೀನ್ (ಸ್ವಾಮಿ ಚಿನ್ಮಯಾನಂದರು) ಪರಲೋಕ ಯಾತ್ರೆಗೆ ಪ್ರಯಾಣ ಮಾಡುವುದರಲ್ಲಿದ್ದರು. ಕೇದಾರ–ಬದರಿ ಯಾತ್ರೆಗೆ ಹೋಗಿ, ಅವರಿಗೆ 'ಹಿಲ್ ಡಯರಿಯಾ' ಉಂಟಾಗಿತ್ತು. ಪ್ರಜ್ಞಾನಂದರು ಹಾಗೂ ಶಚೀನ್ ಇಬ್ಬರೂ ಶರತ್ ಮಹಾರಾಜರನ್ನು ಭೇಟಿಯಾಗಿ ಜೊತೆಯಲ್ಲೇ ಬೇಲೂರು ಮಠಕ್ಕೆ ಹೋಗಿದ್ದರು; ಕೆಲವೇ ಸಮಯದಲ್ಲಿ ಅವರಿಬ್ಬರೂ ಅಂತಿಮ ಪ್ರಯಾಣ ಮಾಡಿದ್ದರು.

೧೯೨೦ ನೇ ಇಸವಿ ಶರತ್ ಮಹಾರಾಜರು ರಾಜಾ ಮಹಾರಾಜರೊಂದಿಗೆ ಭುವನೇಶ್ವರದಲ್ಲಿ ಹತ್ತು ದಿನ ತಂಗಿದ್ದು, ಫೆಬ್ರವರಿ ೧೭ ರಂದು ಬೆಳಿಗ್ಗೆ 'ಉದ್ಬೋಧನ'ಕ್ಕೆ ಮರಳಿದರು. ಜಯರಾಮಬಾಟಿಯಿಂದ ಬಂದ ಪತ್ರದ ಮೂಲಕ ತಿಳಿದು ಬಂತು, ಶ್ರೀಮಾತೆಯವರಿಗೆ ತುಂಬ ಜ್ವರ ಎಂಬುದಾಗಿ. ಶರತ್ ಮಹಾರಾಜ್ ರಾತ್ರಿ ವೇಳೆ ಶ್ರೀ ಸಂನ್ಯಾಲರೊಂದಿಗೆ ಚರ್ಚಿಸಿ ನಿರ್ಧರಿಸಿದರು, ಶ್ರೀಮಾತೆಯವರನ್ನು ಚಿಕಿತ್ಸೆಗಾಗಿ ಕಲ್ಕತ್ತೆಗೆ ಕರೆದುಕೊಂಡು ಬರಬೇಕು ಎಂಬುದಾಗಿ. ಜೊತೆಗೆ ಪ್ರಿಯನಾಥ (ಸ್ವಾಮಿ ಆತ್ಮಪ್ರಕಾಶಾನಂದ), ಶ್ರೀವಿಶ್ವೇಶ್ವರ ಸೇನ್ ಹಾಗೂ ನಾನು ಜಯರಾಮಬಾಟಿಗೆ ಹೋಗಬೇಕೆಂದೂ ನಿರ್ಧರಿಸಲಾಯಿತು. ಫೆಬ್ರವರಿ ೨೦ರಂದು ಹಗಲು ಹೊತ್ತಿನ ರೈಲುಗಾಡಿಯಲ್ಲಿ ನಾವು ಮೂವರು ಹೊರಟೆವು. ಮರುದಿನ ಜಯರಾಮಬಾಟಿ ತಲುಪಿದಾಗ ಶ್ರೀಮಾತೆಯವರು ಅತ್ಯಂತ ಕ್ಷೀಣಿಸಿದ್ದನ್ನು ನೋಡಿದೆವು. ಸೂಕ್ತ ಸಮಯದಲ್ಲಿ ನಾವು ಶ್ರೀಮಾತೆಯವರಿಗೆ ಶರತ್ ಮಹಾರಾಜರ ಪ್ರಾರ್ಥನೆಯನ್ನು ಅರಿಕೆ ಮಾಡಿಕೊಂಡೆವು. ಕಲ್ಕತ್ತೆಗೆ ಹೊರಡುವುದಕ್ಕೆ ಶ್ರೀಮಾತೆಯವರು ಸಮ್ಮತಿ ಸೂಚಿಸಿದರು.

ಶ್ರೀಮಾತೆ 'ಉದ್ಬೋಧನ'ವನ್ನು ತಲುಪಿದರು. ಡಾಕ್ಟರ್ ಕಾಂಜಿಲಾಲ್ ಅವರ ಚಿಕಿತ್ಸೆ ಆರಂಭಿಸಿದರು. ಅಂದು ಶರತ್ ಮಹಾರಾಜ್ ಸ್ವಾಗತ ಕೊಠಡಿಯಲ್ಲಿ ಕುಳಿತು ಒಂದು ಪತ್ರವನ್ನು ಓದುತ್ತಿದ್ದರು. ಓದಿದ ಬಳಿಕ ಅವರೆಂದರು, ''ಏಪ್ರಿಲ್ ೨೪ರಂದು ಲಾಟು ಮಹಾರಾಜ್ ದೇಹತ್ಯಾಗ ಮಾಡಿದರು. ನಿಮಗೆಲ್ಲ ಹೇಳುತ್ತಿದ್ದೇನೆ, ಯಾರೂ ಶ್ರೀಮಾತೆಯವರಿಗೆ ಈ ಸುದ್ದಿಯನ್ನು ಹೇಳಬೇಡಿ.''

ಶ್ರೀಮಾತೆಯವರ ಜ್ವರ ಕಡಿಮೆಯಾಗದ ಕಾರಣ, ಶರತ್ ಮಹಾರಾಜರು ಡಾಕ್ಟರ್ ಪ್ರಾಣಧನ ಬಸು ಅವರನ್ನು ಚಿಕಿತ್ಸೆಗಾಗಿ ಗೊತ್ತುಮಾಡಿದರು. ಅದಕ್ಕಿಂತ ೩–೪ ದಿನ ಮೊದಲೇ ಡಾಕ್ಟರ್ ಜೆ.ಎಂ. ದಾಸಗುಪ್ತ ಅವರು ಶ್ರೀಮಾತೆಯವರ ರಕ್ತಪರೀಕ್ಷೆ ಮಾಡಿದ್ದರು. ಆದರೆ ಅದರಿಂದ ಕಾಲಾ ಜ್ವರದ ಯಾವುದೇ ಲಕ್ಷಣ ಕಂಡು ಬಂದಿರಲಿಲ್ಲ. ಡಾಕ್ಟರ್ ಬಸು ಮೂರು–ನಾಲ್ಕು ಬಾರಿ ಶ್ರೀಮಾತೆಯವರನ್ನು ನೋಡಲು ಬಂದಿದ್ದರು; ಆದರೆ ತಾವು ಯಾರಿಗೆ ಚಿಕಿತ್ಸೆ ಮಾಡುತ್ತಿದ್ದೇವೆ ಎಂಬುದನ್ನು ತಿಳಿಯಬಯಸಿರಲಿಲ್ಲ. ಶ್ರೀಮಾತೆಯವರು 'ಉದ್ಬೋಧನ'ದ ದೇವರ ಕೋಣೆಯಲ್ಲಿದ್ದರು. ಒಂದು ದಿನ ಡಾ. ಬಸು ವೇದಿಕೆಯ ಮೇಲೆ ಸಿಂಹಾಸನದ ಮೇಲೆ ವಿರಾಜಮಾನರಾಗಿದ್ದ ಶ್ರೀರಾಮಕೃಷ್ಣರ ಮೂರ್ತಿಯನ್ನು ಕಂಡು ಶರತ್ ಮಹಾರಾಜರನ್ನು ಕೇಳಿದರು, ''ನಾನು ಯಾರ ಚಿಕಿತ್ಸೆ ಮಾಡಬೇಕಾಗಿದೆ?'' ಅದಕ್ಕೆ ಶರತ್ ಮಹಾರಾಜ್ ಹೇಳಿದರು, ''ಶ್ರೀರಾಮಕೃಷ್ಣರ ಶಿಷ್ಯಂದಿರ ಹಾಗೂ ಭಕ್ತಮಂಡಲಿಯ ತಾಯಿಯ ಚಿಕಿತ್ಸೆ ಮಾಡುವ ಭಾರ ನಿಮ್ಮ ಮೇಲಿದೆ.'' ಆಗ ಡಾಕ್ಟರ್ ಬಸು ದೇವರ ಕೋಣೆಯಲ್ಲಿ ಕುಳಿತಿದ್ದರು; ಅಲ್ಲಿ ಏನನ್ನೂ ಹೇಳಲಿಲ್ಲ. ಕೆಳ ಅಂತಸ್ತಿಗೆ ಬಂದ ಕೂಡಲೇ ದೂರುವ ಧ್ವನಿಯಿಂದ ಶರತ್ ಮಹಾರಾಜರಿಗೆ, ''ನೀವು ಈ ಮಾತನ್ನು ಮೊದಲೇ ಹೇಳಿದ್ದರೆ ಚೆನ್ನಾಗಿತ್ತು'' ಎಂದರು. ಅಂದಿನಿಂದ ಡಾ. ಬಸು ಅವರು ಸಂದರ್ಶನದ ಶುಲ್ಕ ಸ್ವೀಕರಿಸುವುದನ್ನು ನಿಲ್ಲಿಸಿಬಿಟ್ಟರು; ತಾವಾಗಿಯೇ ಶ್ರೀಮಾತೆಯವರ ಚಿಕಿತ್ಸೆಗೆ ಅವರು ತಮ್ಮ ಯತ್ನವನ್ನೆಲ್ಲ ಮಾಡತೊಡಗಿದರು. *(ಮುಂದುವರಿಯುವುದು)*